# ಕರ್ನಾಟಕ ಸರ್ಕಾರ

## ನಿರ್ದೇಶಕರು, ಮಕ್ಕಳ ರಕ್ಷಣಾ ನಿರ್ದೇಶನಾಲಯ ಹಾಗೂ ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ, ಬೆಂಗಳೂರು ಇವರು ಹೊರಡಿಸಿರುವ ನಡವಳಿಗಳು

ವಿಷಯ: ಉಪಕಾರ ಯೋಜನೆಯಡಿ 2021-22 ನೇ ಸಾಲಿನ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಉಲ್ಲೇಖ: ಸರ್ಕಾರದ ಆದೇಶ ಸಂಖ್ಯೆ: ಮಮಇ 185 ಮಭಾಬ 2020, ಬೆಂಗಳೂರು ದಿನಾಂಕ: 17-11-2020.

* * *

**ಪ್ರಸ್ತಾವನೆ**

ಬಾಲನ್ಯಾಯ ಮಕ್ಕಳ (ಪಾಲನೆ ಮತ್ತು ರಕ್ಷಣೆ) ಕಾಯ್ದೆ-2015ಯಡಿ ನೊಂದಾಯಿಸಿರುವ ಎಲ್ಲಾ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿರುವ 18 ವರ್ಷ ಪೂರ್ಣಗೊಂಡ ಮಕ್ಕಳ ಮುಂದಿನ ಪುನರ್ವಸತಿಗಾಗಿ ಹಾಗೂ ಸಮಾಜದಲ್ಲಿ ಗೌರವಯುತವಾಗಿ ಮತ್ತು ಸ್ವತಂತ್ರವಾಗಿ ಜೀವನ ನಿರ್ವಹಿಸಲು ಅನುವಾಗುವಂತೆ ಹಾಗೂ ಅವರುಗಳನ್ನು ಆರ್ಥಿಕ ಸ್ವಾವಲಂಬಿಗಳನ್ನಾಗಿಸಲು "ಉಪಕಾರ್" ಎಂಬ ಹೊಸ ಯೋಜನೆಯನ್ನು ಆಯವ್ಯಯ ಭಾಷಣದಲ್ಲಿ ಘೋಷಿಸಲಾಗಿದೆ. ಹಾಗೆಯೇ ಅದಕ್ಕೆ ಪೂರಕವಾಗಿ ಉಲ್ಲೇಖದನ್ವಯ ಸರ್ಕಾರದ ಆದೇಶವನ್ನು ಹೊರಡಿಸಲಾಗಿದೆ.

ಮಕ್ಕಳು 18 ವರ್ಷ ತುಂಬಿದ ಕಾರಣ ಬಿಡುಗಡೆಗೊಳ್ಳುತ್ತಿದ್ದು, ಅಂತಹ ಮಕ್ಕಳ ವಿದ್ಯಾಭ್ಯಾಸ ಪೂರ್ಣವಾಗದಿದ್ದಲ್ಲಿ, ವಿದ್ಯಾಭ್ಯಾಸ ಮುಂದುವರೆಸಲು ಅಥವಾ ಯಾವುದೇ ವೃತ್ತಿಪರ ಕೌಶಲ್ಯ ತರಬೇತಿ ಹೊಂದಲು ಅಥವಾ ಸ್ವಂತ ಉದ್ಯೋಗ ಪ್ರಾರಂಭಿಸಲು ಮತ್ತು ಸಮಾಜದ ಮುಖ್ಯ ವಾಹಿನಿಗೆ ಬರಲು ಹಾಗೂ ಒಟ್ಟಾರೆ ಆರ್ಥಿಕ ಸ್ವಾವಲಂಬಿಗಳಾಗುವವರೆಗೆ ಅಥವಾ ಗರಿಷ್ಠ 3 ವರ್ಷಗಳ ಅವಧಿಗೆ ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ. ಆರ್ಥಿಕ ಸಹಾಯವನ್ನು ನೀಡುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ.

2021-22ನೇ ಸಾಲಿನಲ್ಲಿ ಈ ಯೋಜನೆಯ ವ್ಯಾಪ್ತಿಗೆ ಒಳಪಡುವ ಫಲಾನುಭವಿಗಳ ಮಾಹಿತಿಯನ್ನು ಹಾಗೂ ಅನುದಾನದ ಬೇಡಿಕೆಯನ್ನು ಎಲ್ಲಾ ಜಿಲ್ಲೆಗಳಿಂದ ಪಡೆಯಲಾಗಿದೆ. ವಿವರಗಳನ್ನು ಪರಿಶೀಲಿಸಿದಾಗ, ಬೀದರ, ಬಿಜಾಪುರ, ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಹಾವೇರಿ, ಮಂಡ್ಯ, ಮೈಸೂರು, ರಾಮನಗರ, ಉಡುಪಿ, ಉತ್ತರಕನ್ನಡ, ಜಿಲ್ಲೆಗಳಲ್ಲಿ ಪ್ರಸ್ತುತ ಸಾಲಿಗೆ ಅರ್ಹ ಫಲಾನುಭವಿಗಳು ಲಭ್ಯವಿರುವುದಿಲ್ಲ. ಹಾಸನ ಜಿಲ್ಲೆಯ ಇಬ್ಬರು ಫಲಾನುಭವಿಗಳಿಗೆ ಸಂಬಂಧಿಸಿದಂತೆ ಅನುದಾನ ಬೇಡಿಕೆಯನ್ನು ಜಿಲ್ಲಾಧಿಕಾರಿಗಳ ಅನುಮೋದನೆಯೊಂದಿಗೆ ಶೀಘ್ರವಾಗಿ ಸಲ್ಲಿಸಲಾಗುವುದು ಎಂದು ತಿಳಿಸಿರುವುದರಿಂದ ಈಗ ಅನುದಾನ ಬಿಡುಗಡೆಗೆ ಪರಿಗಣಿಸಿರುವುದಿಲ್ಲ. ಇನ್ನುಳಿದ 18 ಜಿಲ್ಲೆಗಳ ಮಕ್ಕಳ ಪಾಲನಾ ಸಂಸ್ಥೆಗಳಿಂದ ಬಿಡುಗಡೆಯಾದ ಒಟ್ಟು 159 ಫಲಾನುಭವಿಗಳು ಈ ಆರ್ಥಿಕ ಸಾಲಿಗೆ "ಉಪಕಾರ್" ಯೋಜನೆಯ ಸೌಲಭ್ಯ ಪಡೆಯಲು ಅರ್ಹರಿರುವುದಾಗಿ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಅನುದಾನದ ಬೇಡಿಕೆಯ ಮೊತ್ತದೊಂದಿಗೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

------2

ಆದ್ದರಿಂದ ಒಟ್ಟು 159 ಫಲಾನುಭವಿಗಳಿಗೆ 2021-22ನೇ ಸಾಲಿನ ಅನುದಾನ ಬಿಡುಗಡೆಗೊಳಿಸಲು ಉದ್ದೇಶಿಸಲಾಗಿದೆ. ಜಿಲ್ಲೆಗಳ ಬೇಡಿಕೆಯನುಸಾರ ಒಟ್ಟು ರೂ.92,05,000/-(ಒಟ್ಟು ಮೊತ್ತ ತ್ತೊಂಬತ್ತೆರಡು ಲಕ್ಷದ ಐದು ಸಾವಿರ ರೂಪಾಯಿಗಳು ಮಾತ್ರ.)ಗಳನ್ನು ಮಂಜೂರು ಮಾಡಬೇಕಾಗಿದ್ದು ಅನುಬಂಧದಲ್ಲಿ ವಿವರಿಸಿರುವಂತೆ ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳಿಗೆ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ಜಂಟಿ ಖಾತೆಗೆ PFMS ಮೂಲಕ ಬಿಡುಗಡೆ ಮಾಡಲು ಈ ಆದೇಶ ಹೊರಡಿಸಿದೆ.

ಸಂಖ್ಯೆ: ಮರನಿ/SARA-31/2021-22

ನಿರ್ದೇಶಕರು,<br>ಮಕ್ಕಳ ರಕ್ಷಣಾ ನಿರ್ದೇಶನಾಲಯ ಹಾಗೂ<br>ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ<br>ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ, ಬೆಂಗಳೂರು<br>ದಿನಾಂಕ: 24-02-2022.

## ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಮಕ್ಕಳ ಪಾಲನಾ ಸಂಸ್ಥೆಗಳಿಂದ 18 ವರ್ಷ ತುಂಬಿದ ನಂತರ ಮಕ್ಕಳ ಪಾಲನಾ ಸಂಸ್ಥೆಗಳಿಂದ ಬಿಡುಗಡೆಯಾದ ಮಕ್ಕಳಿಗೆ ಜೀವನೋಪಾಯ ರೂಪಿಸಲು ಉಪಕಾರ ಯೋಜನೆಯಡಿ ಜಿಲ್ಲೆಗಳ ಬೇಡಿಕೆಯನ್ನು ಆಧರಿಸಿ, 18 ಜಿಲ್ಲೆಗಳ 159 ಫಲಾನುಭವಿಗಳಿಗೆ 2021-22ನೇ ಸಾಲಿನ ಅನುದಾನ ರೂ.92,05,000/-(ಒಟ್ಟು ಮೊತ್ತ ತ್ತೊಂಬತ್ತೆರಡು ಲಕ್ಷದ ಐದು ಸಾವಿರ ರೂಪಾಯಿಗಳು ಮಾತ್ರ.)ಗಳನ್ನು ಅನುಬಂಧದಲ್ಲಿ ವಿವರಿಸಿರುವಂತೆ, ಜಿಲ್ಲಾಧಿಕಾರಿ ಹಾಗೂ ಅಧ್ಯಕ್ಷರು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಮತ್ತು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಇವರ ಜಂಟಿ ಖಾತೆಗೆ PFMS ಮೂಲಕ ಈ ಕೆಳಕಂಡ ನಿಬಂಧನೆಗೊಳಪಟ್ಟು ಬಿಡುಗಡೆಗೊಳಿಸಿದೆ.

ಸದರಿ ಅನುದಾನವನ್ನು ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿಯಲ್ಲಿ ಲಭ್ಯವಿರುವ ಆಫ್ಟರ್ ಕೇರ್ ಅನುದಾನದಡಿ 2235-02-102-0-36 ಉಪ ಶೀರ್ಷಿಕೆ 103 (ಸಹಾಯನುದಾನ) ಸಾಮಾನ್ಯ ವೆಚ್ಚದಡಿ 2021-22ನೇ ಸಾಲಿನಲ್ಲಿ ಭರಿಸತಕ್ಕದ್ದು.

**ನಿಬಂಧನೆಗಳು:**

1. ಮಕ್ಕಳ ಕಲ್ಯಾಣ ಸಮಿತಿ/ಬಾಲನ್ಯಾಯ ಮಂಡಳಿಯ ಮೂಲಕ ಮಕ್ಕಳ ಪಾಲನಾ ಸಂಸ್ಥೆಗೆ ದಾಖಲಾಗಿರತಕ್ಕದ್ದು.
2. ಮಕ್ಕಳ ಪಾಲನಾ ಸಂಸ್ಥೆಯಿಂದ ಮಕ್ಕಳ ಕಲ್ಯಾಣ ಸಮಿತಿ/ಬಾಲನ್ಯಾಯ ಮಂಡಳಿಯ ಬಿಡುಗಡೆ ಆದೇಶದ ಮೂಲಕ ಮಾತ್ರ ಬಿಡುಗಡೆಗೊಂಡಿರತಕ್ಕದ್ದು.
3. ಫಲಾನುಭವಿ ಕನಿಷ್ಠ 3 ವರ್ಷದವರೆಗೆ ಮಕ್ಕಳ ಪಾಲನಾ ಸಂಸ್ಥೆಯಲ್ಲಿರುವುದನ್ನು ಖಚಿತ ಪಡಿಸಿಕೊಳ್ಳುವುದು.

------3

4. ವಿಶೇಷ ಪ್ರಕರಣಗಳಲ್ಲಿ ಮಕ್ಕಳ ಪಾಲನಾ ಸಂಸ್ಥೆಯಲ್ಲಿ ಕನಿಷ್ಠ ಒಂದು ವರ್ಷದ ಅವಧಿಗೆ ದಾಖಲಾದ ಮಕ್ಕಳನ್ನು "ಜಿಲ್ಲಾ ಪ್ರಾಯೋಜಕತ್ವ ಮತ್ತು ಪೋಷಕತ್ವ ಅನುಮೋದನಾ ಸಮಿತಿ"ಯು ಗುರುತಿಸಿ, ಶಿಫಾಸ್ಸಿನೊಂದಿಗೆ ಪ್ರಸ್ತಾವನೆಯನ್ನು ಸಲ್ಲಿಸಿ ಜಿಲ್ಲಾಧಿಕಾರಿಗಳಿಂದ ಅನುಮೋದನೆ ಪಡೆದುಕೊಂಡ ತರುವಾಯ ಮಾತ್ರವೇ ಈ ಯೋಜನೆಯ ಸೌಲಭ್ಯವನ್ನು ಒದಗಿಸತಕ್ಕದ್ದು.

5. ಆರ್ಥಿಕ ಬೆಂಬಲಕ್ಕಾಗಿ ಮಕ್ಕಳ ಪಾಲನಾ ಸಂಸ್ಥೆಯ ಮುಖ್ಯಸ್ಥರು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳಿಗೆ ಸಂಪೂರ್ಣ ವಿವರಗಳೊಂದಿಗೆ ಪ್ರಸ್ತಾವನೆಯನ್ನು ಸಲ್ಲಿಸತಕ್ಕದ್ದು.

6. ಪ್ರತಿಯೊಂದು ಫಲಾನುಭವಿಗೆ ಪ್ರತ್ಯೇಕವಾಗಿ ವೈಯಕ್ತಿಕ ಕಡತವನ್ನು ನಿರ್ವಹಿಸುವುದು.

7. **ಜಿಲ್ಲಾ ಪ್ರಾಯೋಜಕತ್ವ ಮತ್ತು ಪೋಷಕತ್ವ ಅನುಮೋದನಾ ಸಮಿತಿಯ ಶಿಫಾರಸ್ಸಿನೊಂದಿಗೆ, ಜಿಲ್ಲಾಧಿಕಾರಿಗಳಿಂದ ಆಡಳಿತಾತ್ಮಕ ಅನುಮೋದನೆ ಪಡೆದು, ನಂತರದಲ್ಲಿಯೇ ಈ ಯೋಜನೆಯ ಪ್ರಯೋಜನವನ್ನು ಅರ್ಹ ಫಲಾನುಭವಿಗಳಿಗೆ ಮಾತ್ರ ಬಿಡುಗಡೆ ಮಾಡತಕ್ಕದ್ದು.**

8. ಎಲ್ಲಾ ಮಕ್ಕಳ ಪಾಲನಾ ಸಂಸ್ಥೆಯಲ್ಲಿ ತ್ರೈಮಾಸಿಕಕ್ಕೊಮ್ಮೆ ವೃತ್ತಿಪರ ಸಮಾಲೋಚನಾ ತಜ್ಞರಿಂದ ಮಕ್ಕಳಿಗೆ ವೃತ್ತಿಪರ ಸಮಾಲೋಚನಾ ಅಧಿವೇಶನವನ್ನು ಕಡ್ಡಾಯವಾಗಿ ಏರ್ಪಡಿಸಲು ಕ್ರಮವಹಿಸತಕ್ಕದ್ದು.

**9**. ಶಿಕ್ಷಣ ಮುಂದುವರಿಸಿದ್ದಲ್ಲಿ, ಶಿಕ್ಷಣ ಸಂಸ್ಥೆಯಿಂದ ದಾಖಲಾಗಿರುವ ಬಗ್ಗೆ ದಾಖಲಾತಿ ಪ್ರಮಾಣ ಪತ್ರ ಹಾಗೂ ಕ್ರಮಬದ್ಧವಾಗಿ ಹಾಜರಾದ ಬಗ್ಗೆ ಪ್ರತಿ ಮಾಹೆ ಹಾಜರಾತಿ ಪ್ರಮಾಣ ಪತ್ರ ಪರಿಶೀಲಿಸಿದ ನಂತರವೇ ಅರ್ಹ ಅವಧಿಗೆ ಸೀಮಿತಗೊಂಡಂತೆ ಅನುದಾನ ಬಿಡುಗಡೆಗೆ ಕ್ರಮವಹಿಸುವುದು. ಹಾಗೂ **ಪ್ರತಿ ತ್ರೈಮಾಸಿಕ ಅವಧಿಯ ಪ್ರಗತಿ ವರದಿಯನ್ನು ಫಲಾನುಭವಿಗಳ ವೈಯಕ್ತಿಕ ಕಡತದಲ್ಲಿ ನಿರ್ವಹಿಸುವುದು.**

10. ವೃತ್ತಿ ಕೌಶಲ್ಯ ತರಬೇತಿಗೆ ದಾಖಲಾಗುವ ಫಲಾನುಭವಿಗಳು ತರಬೇತಿ ಸಂಸ್ಥೆಗೆ ದಾಖಲಾದ ಕುರಿತು ಪ್ರಮಾಣ ಪತ್ರ ಮತ್ತು ಹಾಜರಾತಿ ಪ್ರಮಾಣ ಪತ್ರವನ್ನು ಪರಿಶೀಲಿಸಿದ ತರವಾಯದಲ್ಲಿಯೇ ತರಬೇತಿ ಅವಧಿಗೆ ಅನ್ವಯಿಸುವಂತೆ ಮಾತ್ರವೇ ಅನುದಾನ ಬಿಡುಗಡೆ ಕ್ರಮವಹಿಸುವುದು. ಮತ್ತು ತರಬೇತಿ ನೀಡುವ ಸಂಸ್ಥೆಯ ಸಂಪೂರ್ಣ ವಿಳಾಸ ಹಾಗೂ ದೂರವಾಣಿ ಸಂಖ್ಯೆ ಮತ್ತು ತರಬೇತಿ ಹೊಂದಿದ ಪ್ರಮಾಣ ಪತ್ರವನ್ನು ವೈಯಕ್ತಿಕ ಕಡತದಲ್ಲಿ ನಿರ್ವಹಿಸುವುದು.

11. ಫಲಾನುಭವಿಗಳ ಖಾತೆಗೆ PFMS ಮೂಲಕವೇ ಅನುದಾನವನ್ನು ಜಮೆಗೊಳಿಸತಕ್ಕದ್ದು. ಜಮೆಗೊಂಡ ಅನುದಾನದ ಮೊತ್ತಕ್ಕೆ ಸಂಬಂಧಿಸಿದಂತೆ PPA ಮಾಹಿತಿಯನ್ನು ಕಡ್ಡಾಯವಾಗಿ ಫಲಾನುಭವಿಗಳ ವೈಯಕ್ತಿಕ ಕಡತದಲ್ಲಿ ನಿರ್ವಹಿಸುವುದು. ಆದಾಗ್ಯೂ ದೂರವಾಣಿ ಮೂಲಕ ಸಹಾ ಆರ್ಥಿಕ ಸೌಲಭ್ಯ ತಲುಪಿರುವುದಕ್ಕೆ ಸಂಬಂಧಿಸಿದಂತೆ ನೇರವಾಗಿ ಫಲಾನುಭವಿಗಳಿಂದಲೇ ಮಾಹಿತಿಯನ್ನು ಖಚಿತಪಡಿಸಿಕೊಳ್ಳತಕ್ಕದ್ದು.

------4

ಇದಕ್ಕೆ ಪೂರಕವಾಗಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕದಲ್ಲಿ "ಉಪಕಾರ್" ಯೋಜನೆಯ ಫಲಾನುಭವಿಗಳಿಗೆ ಆರ್ಥಿಕ ಸೌಲಭ್ಯ ತಲುಪಿರುವ ಬಗ್ಗೆ ಮಾಹಿತಿ ವಹಿಯನ್ನು ನಿರ್ವಹಿಸತಕ್ಕದ್ದು. ಈ ಕುರಿತ ನಮೂನೆಯನ್ನು ಆದೇಶದೊಂದಿಗೆ ಅನುಬಂಧ-2ರಲ್ಲಿ ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ನೀಡಿದೆ.

12. ಫಲಾನುಭವಿಗಳ ಅನುಸರಣಾ ವರದಿಯನ್ನು (ತ್ರೈಮಾಸಿಕ) ಪರಿಶೀಲಿಸಿ, ಯೋಜನೆಯಲ್ಲಿ ಫಲಾನುಭವಿಗಳನ್ನು ಮುಂದುವರೆಸಲು ಅಥವಾ ಸ್ಥಗಿತಗೊಳಿಸಲು ಅಗತ್ಯ ಕ್ರಮವಹಿಸತಕ್ಕದ್ದು.

13. ಈಗಾಗಲೇ ಮಕ್ಕಳ ಪಾಲನಾ ಸಂಸ್ಥೆಗಳಿಂದ ಬಿಡುಗಡೆ ಹೊಂದಿ ಈ ಯೋಜನಾ ವ್ಯಾಪ್ತಿಗೆ ಒಳಪಡುವ ಅರ್ಹ ಫಲಾನುಭವಿಗಳ ಪ್ರಕರಣಗಳಲ್ಲಿಯೂ ಸಹಾ ಎಲ್ಲಾ ನಿಬಂಧನೆಗಳನ್ನು ಪರಿಶೀಲಿಸಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.

ನಿರ್ದೇಶಕರು,
ಮಕ್ಕಳ ರಕ್ಷಣಾ ನಿರ್ದೇಶನಾಲಯ, ಹಾಗೂ
ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ
ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ,
ಬೆಂಗಳೂರು.

ಪ್ರತಿಯನ್ನು:

1. ಅಧ್ಯಕ್ಷರು, ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು ಇವರಿಗೆ ಮಾಹಿತಿಗಾಗಿ ರವಾನಿಸಿದೆ.
2. ಲೆಕ್ಕಾಧಿಕಾರಿಗಳು, ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ, ಇವರಿಗೆ ಮಾಹಿತಿಗಾಗಿ ಅನುಬಂಧದಂತೆ ಅನುದಾನವನ್ನು ಸಂಬಂಧಿಸಿದ 18 ಜಿಲ್ಲೆಗಳ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ಜಂಟಿ ಖಾತೆಗಳಿಗೆ PFMS ಮುಖಾಂತರ ಜಮೆ ಮಾಡಲು ಕ್ರಮವಹಿಸುವುದು.
3. ಸಂಬಂಧಿಸಿದ 18 ಜಿಲ್ಲೆಗಳ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳಿಗೆ, ಬಿಡುಗಡೆಗೊಂಡ ಅನುದಾನವನ್ನು ಸೂಕ್ತ ದಾಖಲಾತಿಗಳನ್ನು ಪರಿಶೀಲಿಸಿ, ವಿವರಗಳನ್ನು ಖಚಿತ ಪಡಿಸಿಕೊಂಡ ನಂತರವೇ ಫಲಾನುಭವಿಗಳ ಖಾತೆಗೆ ಕಡ್ಡಾಯವಾಗಿ PFMS ಮೂಲಕ ಜಮೆಗೊಳಿಸಲು ಕ್ರಮವಹಿಸುವುದು ಹಾಗೂ ಕೈಗೊಂಡ ಕ್ರಮದ ವರದಿಯನ್ನು ಕೇಂದ್ರ ಕಛೇರಿಗೆ ಸಲ್ಲಿಸುವುದು.
4. ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಎಲ್ಲಾ ಜಿಲ್ಲೆಗಳು ಇವರ ಮಾಹಿತಿಗಾಗಿ.
5. ಕಛೇರಿ ಪ್ರತಿ.

177

# ಅನುಬಂಧ-1

## 2021-22ನೇ ಸಾಲಿನ ಉಪಕಾರ ಯೋಜನೆಯ ಅನುದಾನ ಬಿಡುಗಡೆ

ಮರನಿ/SARA-31/2021-22 ದಿನಾಂಕ: 24-02-2022.

| ಕ್ರ.ಸಂ | ಜಿಲ್ಲೆಯ ಹೆಸರು | ಉಪಕಾರ್ ಯೋಜನೆ ಅಡಿಯಲ್ಲಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಪ್ರಸ್ತಾವನೆ ಪ್ರಕಾರ ಫಲಾನುಭವಿಗಳ ಸಂಖ್ಯೆ | | | ಜಿಲ್ಲಾ ಮಕ್ಕಳ ರಕ್ಷಣಾ ಘಟಕದಲ್ಲಿನ ಉಳಿಕೆ | 2021-22ನೇ ಆರ್ಥಿಕ ಸಾಲಿನ ಅನುದಾನ ಬಿಡುಗಡೆ. (ಘಟಕದಲ್ಲಿನ ಉಳಿಕೆಯನ್ನು ಹೊರತುಪಡಿಸಿ, ಜಿಲ್ಲೆಗಳ ಬೇಡಿಕೆಯನ್ವಯ ಕೇಂದ್ರ ಕಛೇರಿಯಿಂದ ಬಿಡುಗಡೆ ಮಾಡುತ್ತಿರುವ ಮೊತ್ತ). |
|---|---|---|---|---|---|---|
| | | ಗಂಡು | ಹೆಣ್ಣು | ಒಟ್ಟು | | |
| 1 | ಬಾಗಲಕೋಟೆ | 4 | 6 | 10 | 0 | 6,00,000 |
| 2 | ಬೆಂಗಳೂರು ನಗರ | 15 | 26 | 41 | 10,000 | 24,50,000 |
| 3 | ಬೆಂಗಳೂರು ಗ್ರಾಮಾಂತರ | 0 | 1 | 1 | 0 | 60,000 |
| 4 | ಬೆಳಗಾವಿ | 5 | 5 | 10 | 0 | 5,60,000 |
| 5 | ಬಳ್ಳಾರಿ | 3 | 0 | 3 | 50,000 | 30,000 |
| 6 | ಚಿತ್ರದುರ್ಗ | 0 | 3 | 3 | 0 | 1,80,000 |
| 7 | ದಕ್ಷಿಣ ಕನ್ನಡ | 16 | 18 | 34 | 0 | 20,40,000 |
| 8 | ದಾವಣಗೆರೆ | 8 | 1 | 9 | 0 | 5,40,000 |
| 9 | ಧಾರವಾಡ | 2 | 7 | 9 | 0 | 5,40,000 |
| 10 | ಗದಗ | 3 | 3 | 6 | 0 | 3,60,000 |
| 11 | ಕಲಬುರಗಿ | 2 | 0 | 2 | 0 | 60,000 |
| 12 | ಕೊಡಗು | 0 | 1 | 1 | 0 | 25,000 |
| 13 | ಕೋಲಾರ | 2 | 8 | 10 | 0 | 6,00,000 |
| 14 | ಕೊಪ್ಪಳ | 6 | 7 | 13 | 0 | 7,80,000 |
| 15 | ರಾಯಚೂರು | 3 | 0 | 3 | 40,000 | 1,40,000 |
| 16 | ಶಿವಮೊಗ್ಗ | 2 | 0 | 2 | 0 | 1,20,000 |
| 17 | ತುಮಕೂರು | 1 | 0 | 1 | 0 | 60,000 |
| 18 | ಯಾದಗಿರಿ | 0 | 1 | 1 | 0 | 60,000 |
| | ಒಟ್ಟು | **72** | **87** | **159** | **1,00,000** | **92,05,000** |

ಒಟ್ಟು ಮೊತ್ತ ತೊಂಬತ್ತೆರಡು ಲಕ್ಷದ ಐದು ಸಾವಿರ ರೂಪಾಯಿಗಳು ಮಾತ್ರ

ವಿಶೇಷ ಸೂಚನೆ:- ಜಿಲ್ಲಾ ಪ್ರಾಯೋಜಕತ್ವ ಅನುಮೋದನಾ ಸಮಿತಿಯ ಶಿಫಾರಸ್ಸಿನೊಂದಿಗೆ, ಜಿಲ್ಲಾಧಿಕಾರಿಗಳಿಂದ ಆಡಳಿತಾತ್ಮಕ ಅನುಮೋದನೆ ಪಡೆದು, ನಂತರದಲ್ಲಿಯೇ ಈ ಯೋಜನೆಯ ಪ್ರಯೋಜನವನ್ನು ಅರ್ಹ ಫಲಾನುಭವಿಗಳಿಗೆ ಮಾತ್ರ ಬಿಡುಗಡೆ ಮಾಡತಕ್ಕದ್ದು.

ನಿರ್ದೇಶಕರು,
ಮಕ್ಕಳ ರಕ್ಷಣಾ ನಿರ್ದೇಶನಾಲಯ, ಹಾಗೂ
ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಸಮಗ್ರ
ಮಕ್ಕಳ ರಕ್ಷಣಾ ಸೊಸೈಟಿ,
ಬೆಂಗಳೂರು.

ಅನುಬಂಧ-1

## 2021-22ನೇ ಸಾಲಿನ ಉಪಕಾರ ಯೋಜನೆಯ ಅನುದಾನ ಬಿಡುಗಡೆ

ಸಂಖ್ಯೆ: ಮರನಿ/SARA-31/2021-22 ದಿನಾಂಕ:24-02-2022.

| ಕ್ರ.ಸಂ | ಜಿಲ್ಲೆಯ ಹೆಸರು | ಖಾತೆ ಸಂಖ್ಯೆ | ಒಟ್ಟು ಅನುದಾನ | ಅನುದಾನ ಬಿಡುಗಡೆ ಅವಧಿ |
|---|---|---|---|---|
| 1 | ಬಾಗಲಕೋಟೆ | 00000040706642315 | 600000 | 31.03.2022 |
| 2 | ಬೆಂಗಳೂರು ನಗರ | 00000040331131790 | 2450000 | 31.03.2022 |
| 3 | ಬೆಂಗಳೂರು ಗ್ರಾಮಾಂತರ | 00000040706642417 | 60000 | 31.03.2022 |
| 4 | ಬೆಳಗಾವಿ | 00000040352273752 | 560000 | 31.03.2022 |
| 5 | ಬಳ್ಳಾರಿ | 00000040319796682 | 30000 | 31.03.2022 |
| 6 | ಚಿತ್ರದುರ್ಗ | 00000040309045489 | 180000 | 31.03.2022 |
| 7 | ದಕ್ಷಿಣ ಕನ್ನಡ | 00000040347791318 | 2040000 | 31.03.2022 |
| 8 | ದಾವಣಗೆರೆ | 00000040368384274 | 540000 | 31.03.2022 |
| 9 | ಧಾರವಾಡ | 00000040344545128 | 540000 | 31.03.2022 |
| 10 | ಗದಗ | 00000040347817725 | 360000 | 31.03.2022 |
| 11 | ಕಲಬುರಗಿ | 00000040440387168 | 60000 | 31.03.2022 |
| 12 | ಕೊಡಗು | 00000040323514285 | 25000 | 31.03.2022 |
| 13 | ಕೋಲಾರ | 00000040345990326 | 600000 | 31.03.2022 |
| 14 | ಕೊಪ್ಪಳ | 00000040316888126 | 780000 | 31.03.2022 |
| 15 | ರಾಯಚೂರು | 00000040410674249 | 140000 | 31.03.2022 |
| 16 | ಶಿವಮೊಗ್ಗ | 00000040296826382 | 120000 | 31.03.2022 |
| 17 | ತುಮಕೂರು | 00000040294086154 | 60000 | 31.03.2022 |
| 18 | ಯಾದಗಿರಿ | 00000040345316640 | 60000 | 31.03.2022 |
| | ಒಟ್ಟು | | 92,05,000 | |

ಒಟ್ಟು ಮೊತ್ತ ತೊಂಬತ್ತೆರಡು ಲಕ್ಷದ ಐದು ಸಾವಿರ ರೂಪಾಯಿಗಳು ಮಾತ್ರ.

ಯೋಜನಾ ನಿರ್ದೇಶಕರು

ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ

ಬೆಂಗಳೂರು.